# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :491

ಸದಸ್ಯರ ಹೆಸರು : ಶ್ರೀ.ಕುಶಾಲಪ್ಪ.ಎಂ.ಪಿ (ಸುಜಾ) (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

ಉತ್ತರಿಸುವ ಸಚಿವರು : ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು.

ಉತ್ತರಿಸುವ ದಿನಾಂಕ : 12.12.2023. 8/12/2023

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಐದು ವರ್ಷಗಳಲ್ಲಿ ಕೊಡಗು ಜಿಲ್ಲೆಯಲ್ಲಿ ಏಲಕ್ಕಿ ಬೆಳೆಯ ಪ್ರಮಾಣ ಎಷ್ಟು?(ತಾಲ್ಲೂಕುವಾರುವಿವರ ನೀಡುವುದು) | ಕಳೆದ 5 ವರ್ಷಗಳ ಕೊಡಗು ಜಿಲ್ಲೆಯ ಏಲಕ್ಕಿ ಬೆಳೆಯ ತಾಲ್ಲೂಕುವಾರು ಪ್ರಮಾಣ ಕೆಳಕಂಡಂತಿರುತ್ತದೆ. |

| ವರ್ಷ | ತಾಲ್ಲೂಕುವಾರು ಉತ್ಪಾದನೆ (ಮೆಟ್ರಿಕ್ ಟನ್ ಗಳು) | | |
|---|---|---|---|
| | ಮಡಿಕೇರಿ | ವಿರಾಜ ಪೇಟೆ | ಸೋಮವಾರ ಪೇಟೆ |
| 2017-18 | 2178 | 707 | 734 |
| 2018-19 | 1837 | 605 | 621 |
| 2019-20 | 1812 | 593 | 608 |
| 2020-21 | 1743 | 516 | 513 |
| 2021-22 | 1822 | 599 | 634 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಆ) | ಕಳೆದ ಐದು ವರ್ಷಗಳಲ್ಲಿ ಪ್ರತಿ ಕೆ.ಜಿ. ಏಲಕ್ಕಿ ಬೆಳೆಗೆ ಇದ್ದಂತಹ ಬೆಲೆ ಎಷ್ಟು: ಕಾಲಕ್ರಮೇಣ ಏಲಕ್ಕಿ ಬೆಳೆಯ ಬೆಲೆಯಲ್ಲಿ ಕುಸಿತ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :(ವರ್ಷವಾರು ಮಾಹಿತಿ ನೀಡುವುದು) | ಕಳೆದ ಐದು ವರ್ಷಗಳಲ್ಲಿ ಏಲಕ್ಕಿ ಬೆಳೆಗೆ ಇದ್ದಂತಹ ಬೆಲೆಯು ಈ ಕೆಳಕಂಡಂತಿರುತ್ತದೆ.<br>ಸರಾಸರಿ ಏಲಕ್ಕಿ ಬೆಳೆಯ ಬೆಲೆಯಲ್ಲಿ ಕುಸಿತ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. |

| ವರ್ಷ | ಬೆಲೆ (ರೂ/ಕೆ.ಜಿ) |
|---|---|
| 2019-20 | 2908 |
| 2020-21 | 1478 |
| 2021-22 | 996 |
| 2022-23 | 1114 |
| 2023-24 | 1916 |

| | | |
|---|---|---|
| ಇ) | ಏಲಕ್ಕಿ ಬೆಳೆಯು ವಿನಾಶದ ಅಂಚಿನಲ್ಲಿರುವುದರಿಂದ ಬೆಳೆಗಾರರಿಗೆ ಪ್ರೋತ್ಸಾಹದ ರೀತಿಯಲ್ಲಿ ಸರ್ಕಾರವು ಯಾವುದಾದರೂ ಯೋಜನೆಯನ್ನು ರೂಪಿಸಿದೆಯೇ: ರೂಪಿಸಿದ್ದಲ್ಲಿ ,ಯೋಜನೆಯ ವಿವರವನ್ನು ನೀಡುವುದು: ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆಯೇ: ನೀಡಿದ್ದಲ್ಲಿ ಅದರ ವಿವರವನ್ನು ನೀಡುವುದು? | ಏಲಕ್ಕಿ ಬೆಳೆಯು ವಿನಾಶದ ಅಂಚಿನಲ್ಲಿರುವುದರಿಂದ ಬೆಳೆಗಾರರಿಗೆ ಪ್ರೋತ್ಸಾಹದ ರೀತಿಯಲ್ಲಿ ಭಾರತೀಯ ಸಾಂಬಾರು ಮಂಡಳಿಯ ವತಿಯಿಂದ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>1) ಏಲಕ್ಕಿ ಮರುನಾಟಿಗೆ ಸಹಾಯಧನ ಕಾರ್ಯಕ್ರಮದಡಿಯಲ್ಲಿ ರೋಗಗ್ರಸ್ಥ, ಹಳೆಯ ತೋಟಗಳಲ್ಲಿ ವ್ಯವಸ್ಥಿತವಾಗಿ ಏಲಕ್ಕಿ ಮರುನಾಟಿ ಅಥವಾ ಹೊಸ ಪ್ರದೇಶ ವಿಸ್ತರಿಸಲು ಸಾಮಾನ್ಯ ವರ್ಗದ ರೈತರಿಗೆ ತಗಲುವ ಘಟಕ ವೆಚ್ಚದ ಶೇಕಡಾ 33.33ರಂತೆ ಹೆಕ್ಟೇರಿಗೆ ಗರಿಷ್ಠ ರೂ.75,000/- ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದ ರೈತರಿಗೆ ಶೇಕಡಾ 75ರಂತೆ ರೂ.84,000/ ಸಹಾಯಧನವನ್ನು ನೀಡಲಾಗುವುದು.<br>2) ನೀರಿನ ಶೇಖರಣಾ ಘಟಕಕ್ಕೆ ಸಹಾಯಧನ ಕಾರ್ಯಕ್ರಮದಡಿಯಲ್ಲಿ ಸಾಮಾನ್ಯ ವರ್ಗದ ರೈತರಿಗೆ ನಿರ್ಮಾಣ ವೆಚ್ಚದ ಶೇಕಡಾ 50ರಂತೆ ಘಟಕಕ್ಕೆ ಗರಿಷ್ಠ ರೂ.30,000/-ರಂತೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದ ರೈತರಿಗೆ ಶೇಕಡಾ 75ರಂತೆ ರೂ.45000/-ಗಳ ಸಹಾಯಧನವನ್ನು ನೀಡಲಾಗುವುದು.<br>3) ಮಳೆ ನೀರು ಕೊಯ್ಲು ಘಟಕಕ್ಕೆ ಸಹಾಯಧನ ಕಾರ್ಯಕ್ರಮದಡಿಯಲ್ಲಿ ಸಾಮಾನ್ಯ ವರ್ಗದ ರೈತರಿಗೆ ಪ್ರತಿ ಘಟಕಕ್ಕೆ ನಿರ್ಮಾಣ ವೆಚ್ಚದ 33.33 %ರಂತೆ ಪ್ರತಿ ಘಟಕಕ್ಕೆ ಗರಿಷ್ಠ ರೂ 18,000/- ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡದ ರೈತರಿಗೆ ಶೇಕಡಾ 75ರಂತೆ ರೂ 40,000 /-ಗಳ ಸಹಾಯಧನವನ್ನು ನೀಡಲಾಗುವುದು.<br>4) ಸುಧಾರಿತ ಏಲಕ್ಕಿ ಸಂಸ್ಕರಣಾ ಸಾಧನಗಳಿಗೆ ಸಹಾಯಧನ ಕಾರ್ಯಕ್ರಮದಡಿಯಲ್ಲಿ ಸಾಮಾನ್ಯ ವರ್ಗದ ರೈತರಿಗೆ ನಿರ್ಮಾಣ ವೆಚ್ಚದ ಶೇಕಡಾ 75ರಂತೆ ಪ್ರತಿ ಘಟಕಕ್ಕೆ ಗರಿಷ್ಠ ರೂ .1,50,000/-ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡದ ರೈತರಿಗೆ ಶೇಕಡಾ **90ರಂತೆ** ರೂ 3,37,500/-ಗಳ ಸಹಾಯಧನವನ್ನು |

| | | |
|---|---|---|
| | | ನೀಡಲಾಗುವುದು.<br><br>ತೋಟಗಾರಿಕೆ ಇಲಾಖೆಯ ವತಿಯಿಂದ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>1)ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಏಲಕ್ಕಿ ಬೆಳೆಯ ಪ್ರದೇಶ ವಿಸ್ತರಣೆ ಕಾರ್ಯಕ್ರಮದಡಿ ಘಟಕ ವೆಚ್ಚದ ಶೇ.40ರಂತೆ ಪ್ರತಿ ಹೆಕ್ಟೇರ್ ಗೆ ಗರಿಷ್ಠ ರೂ.20,000/-ಗಳ ಸಹಾಯಧನವನ್ನು ನೀಡಲಾಗುವುದು.<br>2)ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆಯಡಿ ಸಸ್ಯ ಸಂರಕ್ಷಣೆ ಔಷಧಿಗಳಿಗೆ ಗರಿಷ್ಠ 1 ಹೆಕ್ಟೇರ್‌ಗೆ ಶೇ.75 ರಂತೆ ಸಾಮಾನ್ಯ ರೈತರಿಗೆ ರೂ.7500/- ಹಾಗೂ ಪರಿಶಿಷ್ಟ ಪಂಗಡ / ಜಾತಿ ರೈತರಿಗೆ ಶೇ.90ರಂತೆ ರೂ.9000/- ಸಹಾಯಧನ ನೀಡಲಾಗುವುದು.<br>3)ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಕೀಟ ಮತ್ತು ರೋಗಗಳ ನಿರ್ವಹಣೆ ಹಾಗೂ ಪೋಷಕಾಂಶಗಳ ನಿರ್ವಹಣೆ ಕಾರ್ಯಕ್ರಮದಡಿಯಲ್ಲಿ ಘಟಕ ವೆಚ್ಚದ ಶೇಕಡಾ 40ರಂತೆ ಪ್ರತಿ ಹೆಕ್ಟೇರ್‌ಗೆ ಗರಿಷ್ಠ ರೂ.1200/-ಗಳಂತೆ 4 ಹೆಕ್ಟೇರ್ ವರೆಗೆ ಸಹಾಯಧನವನ್ನು ನೀಡಲಾಗುವುದು.<br>4) ಹನಿ ನೀರಾವರಿ ಯೋಜನೆಯಡಿ ಏಲಕ್ಕಿ ಬೆಳೆಗೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ರೈತರಿಗೆ ಶೇ.90ರಷ್ಟು ಮತ್ತು ಇತರೇ ರೈತರಿಗೆ ಶೇ.75ರಷ್ಟು ಸಹಾಯಧನವನ್ನು ಗರಿಷ್ಟ 2 ಹೆಕ್ಟೇರ್ ವರೆಗೆ ನೀಡಲಾಗುವುದು. 2 ಹೆಕ್ಟೇರ್‌ನಿಂದ 5 ಹೆಕ್ಟೇರ್ ವರೆಗೆ ಎಲ್ಲಾ ವರ್ಗದ ರೈತರಿಗೆ ಶೇ.45ರಷ್ಟು ಸಹಾಯಧನವನ್ನು ನೀಡಲಾಗುವುದು. |

NO:HORTI 475 HGM 2023

(ಎಸ್.ಎಸ್.ಮಲ್ಲಿಕಾರ್ಜುನ್)
ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು